ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
*ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ*
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಆಗಸ್ಟ್ 28 , 2014

## ಪತ್ರಿಕಾ ಪ್ರಕಟಣೆ

# ಹದಿನೈದು ದಿನಗಳೊಳಗೆ ಬಾಕಿ ಕಡತಗಳ ವಿಲೇವಾರಿ ಮಾಡಲು ಮುಖ್ಯಮಂತ್ರಿ ಸೂಚನೆ

ಬೆಂಗಳೂರು, ಆಗಸ್ಟ್ 28 (ಕರ್ನಾಟಕ ವಾರ್ತೆ) :

ಮುಂದಿನ 15 ದಿನಗಳೊಳಗೆ ಬಾಕಿ ಇರುವ ಎಲ್ಲಾ ಕಡತಗಳ ವಿಲೇವಾರಿ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದಾರೆ.

ರಾಜ್ಯ ಸಚಿವ ಸಂಪುಟ ಸಭೆಯ ನಂತರ ಇಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಬಹಿರಂಗಪಡಿಸಿದ ಪಶುಸಂಗೋಪನಾ ಮತ್ತು ಮುಜರಾಯಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ ಅವರು ಕಡತಗಳ ವಿಲೇವಾರಿಯಲ್ಲಿ ಮಂದಗತಿಯ ಪ್ರಗತಿ ಕುರಿತಂತೆ ಮುಖ್ಯಮಂತ್ರಿಯವರು ಗಂಭೀರವಾಗಿ ಪರಿಗಣಿಸಿದ್ದಾರೆ. ಅಧಿಕಾರಿಗಳ ವಿಳಂಬ ಧೋರಣೆಯನ್ನು ಸಹಿಸಲಾಗದು ಎಂದು ಸ್ಪಷ್ಟಪಡಿಸಿದ್ದಾರೆ. ಸಚಿವಾಲಯದ ಮಟ್ಟದಲ್ಲಿನ ವಿವಿಧ ಇಲಾಖಾ ಕಡತಗಳ ವಿಲೇವಾರಿ ಕುರಿತು ನಿಗಾ ವಹಿಸುವಂತೆ ಎಲ್ಲಾ ಸಚಿವರಿಗೆ ಸಲಹೆ ಮಾಡಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ಜುಲೈ ಅಂತ್ಯದವರೆಗೆ 2,03,541 ಕಡತಗಳು ವಿವಿಧ ಹಂತಗಳಲ್ಲಿ ವಿಲೇವಾರಿಯಾಗದೆಯೇ ಬಾಕಿ ಉಳಿದಿವೆ. ಅವುಗಳಲ್ಲಿ ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯ 77,995 ಕಡತಗಳು, ಒಂದು ವರ್ಷಕ್ಕೂ ಮೇಲ್ಪಟ್ಟ 24,739 ಕಡತಗಳು, ಎರಡು ವರ್ಷಕ್ಕೂ ಮೇಲ್ಪಟ್ಟ 12,777 ಕಡತಗಳು, ಮೂರು ವರ್ಷಕ್ಕೂ ಮೇಲ್ಪಟ್ಟ 16,841 ಕಡತಗಳೂ ಸೇರಿವೆ. ಕಡತಗಳ ವಿಲೇವಾರಿ ಪ್ರಮಾಣ ಶೇಕಡಾ 35 ರಷ್ಟಿದೆ ಎಂದು ಸಚಿವರು ಅಂಕಿ–ಅಂಶಗಳನ್ನು ವಿವರಿಸಿದರು.

ಅಲ್ಲದೆ, ವಿಲೇವಾರಿಯಾಗದೇ ಬಾಕಿ ಉಳಿದಿರುವ ಕಡತಗಳಲ್ಲಿ ಕಂದಾಯ ಇಲಾಖೆಯ 26,616 ಕಡತಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ 18,928 ಕಡತಗಳು, ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ 12, 761 ಕಡತಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ 7,500 ಕಡತಗಳು, ಒಳಾಡಳಿತ ಇಲಾಖೆಯಲ್ಲಿ 23,383 ಕಡತಗಳು, ನಗರಾಭಿವೃದ್ಧಿ ಇಲಾಖೆಯಲ್ಲಿ 15,436 ಕಡತಗಳೂ ಸೇರಿವೆ ಎಂದರು.

<u>ವಾಂಬೇ : ಅಸಲು – ಸಾಲ ಮನ್ನಾ</u>

**ಕೊಳಗೇರಿಗಳಲ್ಲಿ ವಾಸಿಸುವವರಿಗೆ ವಸತಿ ಕಲ್ಪಿಸುವ ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನಾದಲ್ಲಿ ಫಲಾನುಭವಿಗಳಿಂದ ವಸೂಲು ಮಾಡಬೇಕಿದ್ದ 153 ಕೋಟಿ ರೂ ಅಸಲು ಹಾಗೂ 77 ಕೋಟಿ ರೂ ಬಡ್ಡಿ ಒಳಗೊಂಡಂತೆ 230 ಕೋಟಿ ರೂ ಮನ್ನಾ ಮಾಡಲಾಗಿದೆ. ಪರಿಶಿಷ್ಟ ಜತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ 57,801 ಫಲಾನುಭವಿಗಳಿಗೆ ಇದರ ಲಾಭ ದೊರೆಯಲಿದೆ ಎಂದು ಶ್ರೀ ಜಯಚಂದ್ರ ಅವರು ಹೇಳಿದರು.**

***********

**ಡಿ ಪಿ ಎಂ**